**ದಿನಾಂಕಃ 03-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ**

1) ದೂರಿನ ಜೊತೆಗೆ ಸಲ್ಲಿಸಿದ ಸಾಕ್ಷಿದಾರರ ಯಾದಿಯಲ್ಲಿ ತಿಳಿಸಿದ ವ್ಯಕ್ತಿಗಳಿಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಖಾತೆಗೆ ಸೇರಿದ ಚೆಕ್ ನಂಬರ 478839 ರ ಕುರಿತು ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಿಸಿ ನಂಬರ 3573/2017 ರ ಪ್ರಕರಣದ ಕುರಿತು ನನಗೆ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಆರೋಪಿಗೆ ಸದರಿ ಪ್ರರಕಣದ ಪಿರ್ಯಾದುದಾರರ ಕಡೆಯಿಂದ ನಾನು ಮಧ್ಯಸ್ಥಿಕೆ ವಹಿಸಿ ಹಣ ಕೊಡಿಸಿದ್ದಕ್ಕಾಗಿ ನನಗೆ ಸಾಕ್ಷಿದಾರನೆಂದು ತೋರಿಸಿರುವುದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

2) 2017 ರಿಂದ ಇಲ್ಲಿಯವರೆಗೆ ಆರೋಪಿ ಮತ್ತು ನಾನು ಯಾವತ್ತೂ ಮೋಬೈಲ ಪೋನಿನಲ್ಲಿ ಸಂಭಾಷಣೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಆಗಾಗ ಆರೋಪಿ ನಾನು ಭೇಟಿಯಾದಾಗ ಮಾತನಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಆರೋಪಿ ತನ್ನ ಮಗಳ ಸಮಸ್ಯೆಯನ್ನು ಬಗೆಹರಿಸಲು ನನಗೆ ಕೋರಿಕೊಂಡಿದ್ದ ನಾನು ನನ್ನ ಕೆಲಸದ ಒತ್ತಡವಿರುತ್ತದೆ ಬರಲು ಆಗುವುದಿಲ್ಲ ಎಂದು

ತಿಳಿಸಿದ್ದೆ. 1994 ರಿಂದ ಆರೋಪಿ ಮತ್ತು ನನ್ನ ಸಂಬಂಧ ಚೆನ್ನಾಗಿರುತ್ತದೆ. ಆರೋಪಿ ಆಗಾಗ ನಮ್ಮ ಮನೆಗೆ ಹೋಗಿ ಬಂದು ಮಾಡುತ್ತಿದ್ದ ಎಂದರೆ ಸರಿ. ಅದರಂತೆ ನಾನು ಸಹ ಆರೋಪಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿ.

3) ನೀವು ಆದಾಯ ತೆರಿಗೆ ಪಾವತಿದಾರರಾಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆದಾಯ ತೆರಿಗೆ ಇಲಾಖೆಯವರು ಕೇಳಿದರೆ ಅವರಿಗೆ ಉತ್ತರಿಸುತ್ತೇನೆ ನಿಮಗೆ ಉತ್ತರ ನೀಡುವ ಅವಶ್ಯಕತೆ ನನಗೆ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. 2017 ನೇ ಸಾಲಿನಲ್ಲಿ ಸಿಸಿ ನಂಬರ 3573/2017 ರಲ್ಲಿ ನೀಡಿದ ಚೆಕ್ ನಂಬರ 478839 ರ ಚೆಕ್ಕು ಖಾತೆ ಮುಚ್ಚಲ್ಪಟ್ಟಿರುತ್ತದೆ ಎನ್ನುವ ಕಾರಣಕ್ಕಾಗಿ ಅಮಾನ್ಯಗೊಂಡಿದ್ದು ಈಗೇಕೆ ಅದೆ ಖಾತೆಯ ಚೆಕ್ ನಂಬರ 478838 ರ ಚೆಕ್ಕನ್ನು ನೀಡುತ್ತೀರುವಿ ಎಂದು ಆರೋಪಿಗೆ ಕೇಳಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಆರೋಪಿ ನನಗೆ ಚೆಕ್ ನೀಡುವ ದಿನದಂದು ನನ್ನ ಸಹೋದರಿಯ ಗಂಡ ಮೃತನಾಗಿದ್ದನು, ಹೀಗಾಗಿ ನಾನು ಈ ಪ್ರಕರಣದ ಚೆಕ್ಕಿನ ಕುರಿತು ಚೆಕ್ಕಿನ ಸಂಖ್ಯೆಯಾಗಲೀ ಯಾವ ಖಾತೆಗೆ ಸೇರಿದ ಚೆಕ್ಕಾಗಿರುತ್ತದೆ ಎಂಬುವುದರ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 20-08-2024 ರಂದು ನನಗೆ ಈ ಚೆಕ್ಕಿನ ಬಗ್ಗೆ ಸಂಪೂರ್ಣ ಗೊತ್ತಾಗಿರುತ್ತದೆ. ಹಾಗೆ ಚೆಕ್ಕಿನ ಬಗ್ಗೆ ಗೊತ್ತಾದ ನಂತರ ನೀವೇನಾದರೂ ಆರೋಪಿಗೆ ಕರೆ ಮಾಡಿ ವಿಲಿನಗೊಂಡ ಬ್ಯಾಂಕಿನ ಚೆಕ್ಕನ್ನು ಏಕೆ ಕೊಟ್ಟಿರುತ್ತಿ ಎಂದು ವಿಚಾರ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪವಾರ

ವಕೀಲರಿಗೆ ಕರೆಯಿಸಿ ಆರೋಪಿಯ ಕಡೆಯಿಂದ ಹಣ ಮರಳಿ ಕೊಡಿಸುವುದಕ್ಕಾಗಿ ನೋಟಿಸು ಕುಳುಹಿಸಿರಿ ಎಂದು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡುವ ಸಮಯದಲ್ಲಿ ಕೆ ಆರ್ ಪವಾರ ವಕೀಲರು ಹಾಜರಿರಲಿಲ್ಲ ಎಂದರೆ ಸರಿ. ನಾನು ಆರೋಪಿಗೆ ಹಣ ನೀಡಿರುವ ವಿಷಯ ಕೆ ಆರ್ ಪವಾರ ವಕೀಲರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಆರೋಪಿಗೆ ನೀಡಿದ ಹಣದ ಬಗ್ಗೆ ಕೆ ಆರ್ ಪವಾರ ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

4) ಆರೋಪಿ ನನಗೆ ನ್ಯಾಯಾಲಯದ ಮುಂದೆ ಭೇಟಿಯಾದಾಗ ನಾನು 2024 ರ ಜೂನ ತಿಂಗಳ ಕೊನೆಯ ವಾರದಲ್ಲಿ ನನ್ನಿಂದ ಪಡೆದ ಹಣವನ್ನು ಮರಳಿ ಕೊಡಲು ಕೇಳಿಕೊಂಡಿರುತ್ತೇನೆ.

5) ಸಿಸಿ ನಂಬರ 3573/2017 ರ ಪಿರ್ಯಾದುದಾರರ ಪರ ವಕೀಲರು, ನೋಟಿಸು ನೀಡಿದ ವಕೀಲರು ಮತ್ತು ನನ್ನ ಪಾತ್ರ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಕರಣದಲ್ಲಿ ನಾನು ಸಾಕ್ಷಿದಾರನಾಗಿರುವುದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿಯೂ ಸಹ ಎಮ್ ವಾಯ ಪೂಜಾರಿ ಮತ್ತು ಕೆ ಆರ್ ಪವಾರ ವಕೀಲರು ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿ. ಆರೋಪಿ ಸಿಸಿ ನಂಬರ

3573/2017 ರಲ್ಲಿ ನೀಡಿದ ಚೆಕ್ ನಂಬರ 478838 ಹಾಗೂ 478839 ರ ಚೆಕ್ಕುಗಳಲ್ಲಿನ ಈ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ನಾನು ಇದೊಂದು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.